ಸಿ. ಸಿ. ನಂ. **2607/2019**

ಪಿ. ಡಬ್ಲ್ಯೂ: **1**

**ಸಾಕ್ಷಿಯು ದಿನಾಂಕ: 17-08-2023 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಆರೋಪಿ ಪರ ಶ್ರೀ ಆರ್ ಎನ್ ಬಿ ವಕೀಲರಿಂದ:**

ನಾನು ಲೀಗಲ್ ನೋಟಿಸ್ ತಯಾರಿಸಲು/ಕಳುಹಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ದೂರು ಸಹ ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿಗೆ ನನ್ನ ಬಳಿ ಚೆಕ್ ಇದೆ ಅಂತಾ ಅದರ ಆಧಾರದ ಮೇಲೆ ನೋಟಿಸ್ ನೀಡಿದ್ದೇನೆ. ಆರೋಪಿಯ ಅಕೌಂಟ್ ಸ್ಟೇಟ್ ಮೆಂಟ್ ಪಡೆಯಲು ಅರ್ಜಿ ಸಲ್ಲಿಸಿದ್ದೇನೆ. ದಿನಾಂಕ ನೆನಪಿಲ್ಲ.

ಆರೋಪಿಯ ಅಕೌಂಟ್ ಸ್ಟೇಟ್‌ಮೆಂಟ್ ಪಡೆಯಲು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ಪ್ರತಿನಿಧಿಸುತ್ತಿರುವ ವಕೀಲ ನನ್ನ ಸಹೋದರ ಅಂದರೆ ಸರಿ. ಆರೋಪಿ ಕಳೆದ **10** ವರ್ಷಗಳಿಂದ ಪರಿಚಯ ಆತನು ನಮ್ಮ ಸಂಬಂಧಿ ಅಲ್ಲ.

ದೂರಿನಲ್ಲಿ ಆರೋಪಿಯ ತಂದೆಯ ಹೆಸರು ಗೊತ್ತಿಲ್ಲ ಅಂತಾ ನಮೂದಿಸಿದ್ದೇನೆ ಅಂದರೆ ಸರಿ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ ಮತ್ತು ಆರೋಪಿ ಬಗ್ಗೆ ನನಗೆ ಏನೂ ಗೊತ್ತಿಲ್ಲ ಅಂದರೆ ಸರಿಯಲ್ಲ.ಆರೋಪಿ ಚೆಕ್ ಕೊಡುವುದಕ್ಕಿಂತ ಮುಂಚೆ **6-7** ತಿಂಗಳು ಮೊದಲೇ ಬಂದಿದ್ದರು ಹಣ ಪಡೆದ **6** ತಿಂಗಳು ನಂತರ ಈ ಚೆಕ್ ನ್ನು ನೀಡಿದ್ದಾರೆ. ದಿ: **15-07-2018** ರಂದು ಆರೋಪಿ ಆತನ ಮನೆಯಲ್ಲಿ ಚೆಕ್ ನೀಡಿದ್ದಾರೆ.

ಆರೋಪಿಯು ಮೊತ್ತ ಮತ್ತು ದಿನಾಂಕವನ್ನು ಅವರ ಹಸ್ತಾಕ್ಷರದಿಂದ ಬರೆದಿದ್ದಾರೆ. ಅಂಕಿಗಳನ್ನು ರೋಮನ್ ಭಾಷೆಯಲ್ಲಿ ಬರೆದಿದ್ದಾರೆ. ಸಹಿಯನ್ನು ಕನ್ನಡ ಭಾಷೆಯಲ್ಲಿ ಮಾಡಿದ್ದಾರೆ ಆರೋಪಿ ನನ್ನ ಸಮಕ್ಷಮದಲ್ಲಿ ಸಹಿ ಮಾಡಿದ್ದಾನೆ.

ಸಿ. ಸಿ. ನಂ. **2607/2019**

**ಪಿ. ಡಬ್ಲ್ಯೂಃ 1**

ನಿಪಿಃ 1 ರಲ್ಲಿ ಸಹಿ ಮಾಡಿದ ಇಂಕ್ ಮತ್ತು ಮೊತ್ತ ಬರೆದ ಇಂಕ್ ವ್ಯತ್ಯಾಸ ಇದೆ ಅಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡಿ ಖೊಟ್ಟಿ ದಾಖಲೆ ಸೃಷ್ಟಿಸಿ ಸುಳ್ಳು ಕೇಸ್ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯ ಖಾತೆಯಲ್ಲಿ ಹಣ ಇಲ್ಲ ಅಂತಾ ಅಮಾನೀಕರಣಗೊಂಡ ನಂತರ ಗೊತ್ತಾಯಿತು. ದಿಃ **18-04-2018** ರಂದು ಚೆಕ್ ಅಮಾನೀಕರಣವಾಗಿದೆ. ಚೆಕ್ ನ್ನು ಸ್ಲಿಪ್ ತುಂಬಿ ಡಿಪಾಸಿಟ್ ಮಾಡಿದ್ದೇನೆ.

ಬ್ಯಾಂಕಿನವರು ದಿಃ **14-10-2019** ರಂದು ಚೆಕ್ ರಿಟರ್ನ ಮೆಮೋವನ್ನು ನ್ಯಾಯಾಲಯದ ಆದೇಶದ ಮೇರೆಗೆ ನೀಡಿದ್ದಾರೆ ಅಂದರೆ ಸರಿ. ಅದನ್ನು ಈಗಾಗಲೇ ನಿಪಿಃ 2 ಅಂತಾ ಗುರುತಿಸಲಾಗಿದೆ. ನಾನು ಮತ್ತು ನಮ್ಮ ವಕೀಲರು ಬ್ಯಾಂಕಿನವರ ಮೇಲೆ ದಬ್ಬಾಳಿಕೆ ಮಾಡಿ ಹಳೆಯ ದಿನಾಂಕವನ್ನು ನಮೂದಿಸಿಕೊಂಡು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ, ಅವರು ಯಾವುದೇ ಹಣವನ್ನು ಕೊಡುವ ಭಾದ್ಯಸ್ಥರಲ್ಲ ಅಂದರೆ ಸರಿಯಲ್ಲ, ಈ ದೂರು ದಾಖಲಿಸಲು ಯಾವುದೇ ಕಾರಣ ಉಂಟಾಗಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.